


ಎಡದಿಂದ ಬಲಕ್ಕೆ:

1. ಅವನ ಆಸೆಯನ್ನು ನೆರವೇರಿಸುವಲ್ಲಿ ಶ್ರಮವೇನೂ ಇಲ್ಲ 4
3. ಮೊಸರನ್ನವನ್ನು ಸಿದ್ಧಪಡಿಸಲು ಬೇಕಾದ ಪರಿಕರ ಹೇಗೆ? 3
4. ದೋಸೆಯನ್ನು ತಯಾರಿಸಲು ಅವಶ್ಯವಾದ ವಸ್ತುಗಳ ಭಾರೀ ಸಂಗ್ರಹ 3
6. ಭಂಗವಾಗುವುದನ್ನು ತಪ್ಪಿಸಲು ಬೇಕಾದದ್ದು'ಸ್ನೇಹದ ಶಕ್ತಿ' 4
7. ಮಂಪರಿನ ಸಮಯದಲ್ಲಿಕಂಡದ್ದು ಮೃತ್ಯು ದೇವತೆಯ ನಗರ 4
9. ಭಾರೀಮರವನ್ನೇರುವ ಅವನ ಆಸೆ ಕೈಗೂಡಿತಲ್ಲ? 4
11. ಆತುರ ಪಡುವವರಿಂದ ಎಲ್ಲೆಲ್ಲೂ ಬರೀ ಗಲಿಬಿಲಿ
14. ಹಣವೆಲ್ಲ ಖಾಲಿಯಾದೊಡನೆ ವಿವಾಹವೂ ಹಿಂದುಮುಂದು 3
15. ಬಣ್ಣಿಸುವವರೇ ಇಲ್ಲ; ಅಂಥ ಸುಂದರ ಡಬ್ಬಿ 3
16. ಮಣ್ಣಿನ ರಚನೆಯಾದರೂ ಎಷ್ಟು ಸುಂದರ ನೋಡಿ 4

ಮೇಲಿಂದ ಕೆಳಕ್ಕೆ:

1. ಅನ್ಯರ ಕೆಲಸಗಳಿಗೆ ಇಲ್ಲಿದೆ ಎಲ್ಲ ಸೌಕರ್ಯ 4
2. ದೇಶೀಯ ಉತ್ಪನ್ನಗಳನ್ನೇ ಬಳಸಬೇಕೆಂಬುದು ಒಳ್ಳೆಯ ಆಸೆಯೇ ತಾನೇ? 4
3. ಅಡವಿಯ ಸುರಂಗದ ಮೂಲಕ ಓಡಿಬಂದದ್ದು ಇದೆಂಥ ಜಿಂಕೆ! 3
5. ಭಾರೀ ನೈಪುಣ್ಯದ ಕೆಲಸ ; ಅದಕ್ಕೇ ಇಷ್ಟೊಂದು ನಯ 3
6. ಸಭಾಭವನವನ್ನೆಲ್ಲ ಅಲಂಕರಿಸಿದ್ದಕ್ಕೆ ನೀಡಿದ ಗೌರವಧನ 4
8. ಬೇರೇನು ಕಾರಣ? ಇದು ಬರೀ 'ಸಾಲದ ಹೊರೆ 4
10. ಅಪಹರಣ ಮಾಡಿದ ವಸ್ತುಗಳನ್ನೆಲ್ಲ ಅಲ್ಲೇ ಬಿಟ್ಟು ಹೋಗುವುದೇ? 3
11. ಖರ್ಚು ಕಡಿಮೆಯಾದರೂ ನಾಲಿಗೆಗೆ ಹಿತವಾಗುವಂತಿದೆ 4
12. ಬೈಯುವವರು ಯಾರಿಲ್ಲದಿದ್ದರೂ ಆವನಿಗೆ ಸದಾ ಶತ್ರುವಿನ ಹೆದರಿಕೆ 4
13. ಸಂತ್ರಸ್ತರ ರುಣ ತೀರಿಸಲು ಮುಂದಾದಳು ಯುವತಿ 3

---

## 05-11-2020 ಉತ್ತರಗಳು

ಎಡದಿಂದ ಬಲಕ್ಕೆ:

1. ಅಪಾಯ 3. ಪ್ರಪಂಚ 4. ವಸತಿ 6. ರಸನ (=ನಾಲಿಗೆ)7. ಆಪದ್ಧನ 9. ತಿರುನಾಮ 11. ಸುಡುಜಲ 13. ಲಕ್ಷಪತಿ 15. ಭವನ 17. ನಗರಿ 18. ವೀಕ್ಷಕ 19. ಸುಮ್ಮಾನ

ಮೇಲಿಂದ ಕೆಳಕ್ಕೆ:

1. ಅಚರ 2. ಯವನ 3. ಪ್ರಸಿದ್ಧ 5. ತಿಮಿರು 7. ಆಶ್ರಯಿಸು 8. ನಡುಗಾಲ 9. ತಿಲತೈಲ 10. ಮಧುವಂತಿ 12. ಜತನ 14. ಕ್ಷಣಿಕ 15. ಭರಿಸು 16. ನವೀನ

ಪ್ರಶ್ನಾಂಕಣ

# ಧೂಳು ಹುಳು: ಅದೆಂಥ ಜೀವಿ?

ಹೆಸರೇ ಸೂಚಿಸುವಂತೆ ಧೂಳಿನ ಕಣಗಳಷ್ಟೇ ಗಾತ್ರದಲ್ಲಿರುವ, ಧೂಳಿನ ಕಣಗಳನ್ನೇ ಆಶ್ರಯಿಸಿ ಬದುಕುವ ಜೀವಿಯೇ ಧೂಳು ಹುಳು (ಡಸ್ಟ್ ಮೈಟ್). ಸಾಮಾನ್ಯವಾಗಿ ಮನೆ ಧೂಳಿನಲ್ಲೇ ವಾಸಿಸುವ ಈ ಜೀವಿಗಳದು ಬರಿಗಣ್ಣಿಗೆ ಗೋಚರವೇ ಆಗದಷ್ಟು ಸೂಕ್ಷ್ಮ ಗಾತ್ರ ; ಕೇವಲ ಅರ್ಧ ಮಿಲಿ ಮೀಟರ್ ಅನ್ನೂ ಮುಟ್ಟದ ಗಾತ್ರ. ಆದರೆ ಸೂಕ್ಷ್ಮದರ್ಶಕಗಳ ಮೂಲಕ ಕಾಣುವ ಅವುಗಳ ರೂಪ ಮಾತ್ರ ತುಂಬ ಸಂಕೀರ್ಣ, ಸೋಜಿಗಮಯ ಮತ್ತು ಭಯಾನಕ ಕೂಡ (ಸೂಕ್ಷ್ಮ ದರ್ಶಕದ ಮೂಲಕ ಕಾಣುವ ಮನೆ ಧೂಳಿನ ಕಣಗಳನ್ನು ಚಿತ್ರ 1 ರಲ್ಲೂ, ಧೂಳು ಹುಳುಗಳ ಸ್ವರೂಪವನ್ನು ಚಿತ್ರ 2 ಮತ್ತು3 ರಲ್ಲೂ ಗಮನಿಸಿ).

ಧೂಳು ಹುಳುಗಳದು ಮನೆ ಧೂಳಿನಲ್ಲೇ ಗರಿಷ್ಠ ದಟ್ಟಣೆ. ಏಕೆಂದರೆ, ಮನೆ ಧೂಳೇ ಅವುಗಳ ಆಹಾರ ಮೂಲ. ನಿಮಗೇ ತಿಳಿದಂತೆ ಮನೆ ಧೂಳಿನಲ್ಲಿ ಸೂಕ್ಷ್ಮ ಗಾತ್ರದ ಮಣ್ಣಿನ ಕಣಗಳು, ಬಟ್ಟೆದಾರಗಳ ತುಣುಕುಗಳು, ಜೇಡ ಬಲೆಯ ಚೂರುಗಳು, ... ಇತ್ಯಾದಿಗಳ ಜೊತೆಗೆ ಮನುಷ್ಯರ ಚರ್ಮದ ಕಣ ಗಾತ್ರದ ತುಣುಕುಗಳೂ ಭಾರೀ ಸಂಖ್ಯೆಯಲ್ಲಿ ಬೆರೆತಿರುತ್ತವೆ. ಮನುಷ್ಯರ ಶರೀರವನ್ನಾವರಿಸಿರುವ ಚರ್ಮದ ಮೇಲ್ಪದರದಿಂದ ನಿತ್ಯ ನಿರಂತರ ಉದುರುತ್ತಲೇ ಇರುವ ಇಂಥ ಮೃತ ಜೀವಕೋಶಗಳೇ ಧೂಳು ಹುಳುಗಳ ಪ್ರಮುಖ ಆಹಾರ. ಆದ್ದರಿಂದಲೇ ಮನುಷ್ಯರು ಕೂರುವ ಪೀಠೋಪಕರಣಗಳಲ್ಲಿ, ಮಲಗುವ ಹಾಸಿಗೆಗಳಲ್ಲಿ, ನೆಲಹಾಸುಗಳಲ್ಲಿ, ಮನೆಯಲ್ಲಿ ಜನ ಅತಿ ಹೆಚ್ಚು ಓಡಾಡುವ ಸ್ಥಳಗಳಲ್ಲಿ ಈ ಜೀವಿಗಳ ಸಂಖ್ಯೆ ಅತ್ಯಧಿಕ. ಒಂದು ಲೆಕ್ಕಾಚಾರದ ಪ್ರಕಾರ ಪ್ರತಿ ವ್ಯಕ್ತಿಯ ದೇಹದಿಂದ ಪ್ರತಿ ದಿನ ಸರಾಸರಿ 1.5 ಗ್ರಾಂ ಚರ್ಮ ಉದುರುತ್ತದೆ; ಅದು ಒಂದು ದಶಲಕ್ಷ ಧೂಳು ಹುಳುಗಳಿಗೆ ಸಾಕಾಗುತ್ತದೆ! ಆದ್ದರಿಂದಲೇ ಪ್ರತಿ ಮನೆಯಲ್ಲೂ ಮಿಲಿಯಗಟ್ಟಳೆ ಧೂಳು ಹುಳುಗಳು ನೆಲೆ ಹಿಡಿದಿರುತ್ತವೆ.




ಧೂಳು ಹುಳುಗಳು ತಿಗಣೆ ಸೊಳ್ಳೆಗಳಂತೆ ಪಿಡುಗುಕಾರಕಗಳಲ್ಲ; ಅವು ನಮ್ಮನ್ನು ಕಚ್ಚುವುದಿಲ್ಲ; ನಮ್ಮ ರಕ್ತವನ್ನು ಹೀರುವುದಿಲ್ಲ; ರೋಗಗಳನ್ನು ಹರಡುವುದಿಲ್ಲ. ಆದರೆ ಅವು ಅಲರ್ಜಿಕಾರಕಗಳು. ಈ ಜೀವಿಗಳ ಸ್ಪರ್ಶ ಚರ್ಮದಲ್ಲಿ ತುರಿಕೆ ಎಬ್ಬಿಸುತ್ತದೆ. ಇವು ಉಸಿರಿನಲ್ಲಿ ಬೆರೆತರೆ ಗಂಟಲ ಕೆರೆತವನ್ನು ತರುತ್ತವೆ; ಕಣ್ಣನ್ನು ಕೆಂಪಗಾಗಿಸಿ ಮೂಗಲ್ಲಿ ನೀರು ಸುರಿಸುತ್ತವೆ. ಕೆಲವರಲ್ಲಂತೂ ಕೆಮ್ಮು, ದಮ್ಮು, ತಲೆಶೂಲೆಗಳನ್ನು ಬರಿಸಿ ಆಸ್ತಮಾದಂತೆ ಶ್ವಾಸದ ಎಳೆತಕ್ಕೂ ಕಾರಣವಾಗುತ್ತವೆ.

ಅದಕ್ಕೆಲ್ಲ ಮನೆಯ ಸ್ವಚ್ಛತೆಯೊಂದೇ ಪರಿಹಾರ. ನಿತ್ಯವೂ ನೆಲವನ್ನು ಒರೆಸಿ, ಆಗಾಗ ಹಾಸಿಗೆ ಬಟ್ಟೆಗಳನ್ನು ಹೊದಿಕೆಗಳನ್ನು ಒಗೆದು ಒಣಗಿಸಿ, ಪೀಠೋಪಕರಣಗಳು ನೆಲಹಾಸುಗಳು ಪುಸ್ತಕಗಳು ಇತ್ಯಾದಿಗಳಲ್ಲಿ ಕಿಂಚಿತ್ತೂ ಧೂಳು ಸಂಗ್ರಹವಾಗದಂತೆ ಇರಿಸಿದರೆ ಮಾತ್ರ ಈ ಜೀವಿಗಳನ್ನು ದೂರ ಇಡುವುದು ಸಾಧ್ಯ.

■ ಎನ್. ವಾಸುದೇವ್